| | | |
|---|---|---|
| ಓ ಎಸ್ | 83/2017 | ಡಿ.ಡಬ್ಲ್ಯೂಃ 1 |

ಇಂದು ದಿಃ 30/3/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಕುಮಾರ್ ವಕೀಲರಿಂದಃ-

ನನ್ನ ಮಾವನ ಹೆಸರು ಅಂದರೆ ಪತ್ನಿಯ ತಂದೆಯ ಹೆಸರು ಸುಬ್ಬಯ್ಯನ ಸಿದ್ದಯ್ಯ ಎಂದರೆ ನಿಜ. ಸುಬ್ಬಯ್ಯ ರವರು ಅವರ ಮಗ ಎಂದರೆ ನಿಜ. ಅವರಿಗೆ ಜಂತಗಳ್ಳಿ ಎಲ್ಲೆಯಲ್ಲಿ ಜಮೀನು ಇರುವುದೇ ಎಂದರೆ ಹೇಳಲು ಗೊತ್ತಿಲ್ಲ. ಮೈಸೂರು ತಾಲ್ಲೂಕು ವರುಣ ಹೋಬಳಿ ಜಂತಗಳ್ಳಿಯಲ್ಲಿ ಸ ನಂ.141/1 ರಲ್ಲಿ 1 ಎಕರೆ 11 ಗುಂಟೆ ಜಮೀನು ಸದರಿ ಸುಬ್ಬಯ್ಯ ರವರ ಹೆಸರಿನಲ್ಲಿ ಇದೆ ಎಂದರೆ ಗೊತ್ತಿಲ್ಲ. ಸದರಿ ಆಸ್ತಿ ಹೊರತುಪಡಿಸಿ ನನ್ನ ಬಾಮೈದ ಸುಬ್ಬಯ್ಯ ರವರಿಗೆ ಬೇರೆ ಯಾವುದೇ ಜಮೀನು ಇಲ್ಲ ಎಂದರೆ ಗೊತ್ತಿಲ್ಲ.

ನನ್ನ ಪತ್ನಿಯ ಜೊತೆ ಒಡಹುಟ್ಟಿದವರು ಒಟ್ಟು 3 ಜನ. ನನ್ನ ಬಾಮೈದ ನನ್ನ ಮಾವನಿಗೆ ಏಕಮಾತ್ರ ಪುತ್ರ ನನ್ನ ಮಾವ ನನ್ನ ಪತ್ನಿಯ ಅಕ್ಕತಂಗಿಯರಿಗೆ ಯಾವುದೇ ಜಮೀನು ತೆಗೆಸಿಕೊಟ್ಟಿಲ್ಲ. ನನ್ನ ಪತ್ನಿಯ ತಂದೆಯ ಕುಟುಂಬಕ್ಕೆ ಬಿ ಪಿ ಎಲ್ ಕಾರ್ಡ್ ಇರುವುದು ಎಂದರೆ ಗೊತ್ತಿಲ್ಲ. ನ್ಯಾಯಬೆಲೆ ಅಂಗಡಿಯಿಂದ ಅಕ್ಕಿಯನ್ನು ಉಚಿತವಾಗಿ ಅವರು ಪಡೆದುಕೊಳ್ಳುತ್ತಾರೆ ಎಂದರೆ ಗೊತ್ತಿಲ್ಲ. ನನ್ನ ಬಾಮೈದನಿಗೆ ಬೇರೆ ಯಾವುದೇ ಆದಾಯ ಇಲ್ಲ ಎಂದರೆ ಆತ ಹಾಸ್ಟೆಲ್ ನಲ್ಲಿ ಅಡಿಗೆಮಾಡಿಕೊಂಡು ಡ್ಯೂಟಿ ಮಾಡಿಕೊಂಡು ಇದ್ದ ಎಂದು ನುಡಿಯುತ್ತೇನೆ. ಆರೀತಿ ತೋರಿಸುವ ದಾಖಲೆ ಹಾಜರುಪಡಿಸಬಹುದೇ ಎಂದರೆ ಅವರ ದಾಖಲೆಯನ್ನು ನಾನು ಹೇಗೆ ಹಾಜರುಪಡಿಸುವುದು ಎಂದು ನುಡಿಯುತ್ತೇನೆ. ಆರೀತಿ ಪತ್ರ ಹಾಜರುಪಡಿಸಲು ತೊಂದರೆ ಇದೆಯೇ ಎಂದು ಕೇಳಿದರೆ ಅದು ಹೇಳಲು ನನಗೆ ಗೊತ್ತಿಲ್ಲ ಎಂದು ನುಡಿಯುತ್ತೇನೆ.

ನನ್ನ ಪತ್ನಿಯ ಹೆಸರಿನಲ್ಲಿ ಇರುವ ಸ್ವತ್ತು ಒಟ್ಟು ಕುಟುಂಬದ ಆದಾಯದಿಂದ ಖರೀದಿಮಾಡಿರುವ ಸ್ವತ್ತು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನುಡಿಯುತ್ತಾರೆ

ಒಟ್ಟುಕುಟುಂಬದ ಆದಾಯ ಜೀವನಮಾಡಲು ಕೂಡ ಸಾಕಾಗುತ್ತಿರಲಿಲ್ಲ. ಹಾಗಿದ್ದಲ್ಲಿ ಅದನ್ನು ಖರೀದಿ ಮಾಡಿದ್ದು ಹೇಗೆ ಎಂದು ಕೇಳಿದರೆ ಸುಬ್ಬಯ್ಯನ ತಾತನ ಮನೆಯವರು ಕೊಡಿಸಿದ್ದು ಎಂದು ನುಡಿಯುತ್ತೇನೆ. ದಾವಾ ಐಟಂ 3 ಮತ್ತು 5 ನ್ನು ನನ್ನ ಪತ್ನಿಗೆ ಆಕೆಯ ತವರುಮನೆಯವರು ಕೊಡಿಸಿದ್ದು ಎಂದು ಲಿಖಿತ ತಕರಾರಿನಲ್ಲಿ ಅಥವಾ ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿ ಬರೆಸಲು ತೊಂದರೆ ಇತ್ತೇ ಎಂದು ಕೇಳಿದರೆ ತೊಂದರೆ ಇರಲಿಲ್ಲ ಎಂದು ನುಡಿಯುತ್ತೇನೆ. ಅವು ಒಟ್ಟು ಕುಟುಂಬದ ಆಸ್ತಿಗಳು ಆಗಿರುವುದರಿಂದಲೇ ಆರೀತಿ ಲಿಖಿತ ತಕರಾರಿನಲ್ಲಿ ಅಥವಾ ಮುಖ್ಯ ವಿಚಾರಣೆಯಲ್ಲಿ ನಮೂದು ಮಾಡಿಲ್ಲ ಎಂದರೆ ಸರಿಯಲ್ಲ. ದಾವಾ ಐಟಂ 1 ಭೂನ್ಯಾಯಮಂಡಳಿಯಿಂದ ಮಂಜೂರಾಗಿದ್ದು ಎಂದು ತೋರಿಸುವ ದಾಖಲೆಯನ್ನು ಹಾಜರುಪಡಿಸುತ್ತೇನೆ. ಅದು ಒಟ್ಟುಕುಟುಂಬದ ಆಸ್ತಿ ಎಂದು ಒಪ್ಪಿ ಕೊಂಡರೆ ನನ್ನ ಸಹೋದರಿಯರಿಗೆ ಭಾಗಾಂಶ ಕೊಡಬೇಕಾಗುತ್ತೆ ಎಂದು ಅದು ಸ್ವಂತ ಆಸ್ತಿ ಎಂದು ಸುಳ್ಳು ಹೇಳುತ್ತಿರುವುದು ಎಂದರೆ ಸರಿಯಲ್ಲ. ವಾದಿ ಚಿಕ್ಕಣ್ಣಮ್ಮ ರವರ ಗಂಡನಮನೆಯ ಆಸ್ತಿಗೂ ಹಾಗು ನನ್ನ ಪತ್ನಿಗೂ ಯಾವುದೇ ಹಕ್ಕು ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನನ್ನ ಪತ್ನಿಗೆ ಚಿಕ್ಕಣ್ಣಮ್ಮ ರವರ ಗಂಡನ ಮನೆಯ ಆಸ್ತಿಯ ಮೇಲೆ ಯಾವುದೇ ದಾವೆ ದಾಖಲಿಸಿಲ್ಲ ಎಂದರೆ ಸರಿಯಲ್ಲ. ನನ್ನ ಪತ್ನಿಯನ್ನು ಕರೆಸಿ ಸಾಕ್ಷಿ ಹೇಳಿಸಲು ನನಗೆ ತೊಂದರೆ ಇಲ್ಲ ಎಂದರೆ ಆರೀತಿ ಕರೆಸಿ ಸಾಕ್ಷಿ ನುಡಿಸುವ ಅವಶ್ಯಕತೆ ಇಲ್ಲ ಎಂದು ನುಡಿಯುತ್ತೇನೆ. ದಾವಾ ಐಟಂ 3 ಮತ್ತು 5 ಖರೀದಿ ಕುರಿತು ಹಣವನ್ನು ನನ್ನ ಪತ್ನಿಯ ತವರುಮನೆಯ ಕಡೆಯವರ ಪೈಕಿ ಯಾರು ಪಾವತಿಸಿದ್ದು ಎಂದು ನಿ ಡಿ 7 ಮತ್ತು 9 ಕ್ರಯಪತ್ರದಲ್ಲಿ ಎಲ್ಲೂ ನಮೂದು ಇಲ್ಲ ಎಂದರೆ ನಿಜ. ನನ್ನ ಪತ್ನಿಯ ತವರುಮನೆಯ ಕಡೆಯವರು ಆರೀತಿ ಹಣ ಪಾವತಿಸಿಲ್ಲವಾದ್ದರಿಂದಲೇ ಆರೀತಿ ಕ್ರಯಪತ್ರದಲ್ಲಿ ನಮೂದು ಇಲ್ಲದಿರುವುದು ಎಂದರೆ ಸರಿಯಲ್ಲ. ನನ್ನ ಪತ್ನಿ ನ್ಯಾಯಾಲಯಕ್ಕೆ ಬಂದು ಸಾಕ್ಷಿ ನುಡಿದರೆ ನಿಜಾಂಶ ಬಯಲಾಗುತ್ತೆ ಎಂದು ಆಕೆ ಸಾಕ್ಷಿ ನುಡಿಯುವ ಅವಶ್ಯಕತೆ ಇಲ್ಲ ಎಂದು ಹಾರಿಕೆ ಉತ್ತರ ನೀಡುತ್ತಿರುವುದು ಎಂದರೆ ಸರಿಯಲ್ಲ. ನಾನೇ ಒಟ್ಟು ಕುಟುಂಬದ ಆದಾಯದಿಂದ ನನ್ನ ಪತ್ನಿ ಹೆಸರಿಗೆ ಜಮೀನು ಖರೀದಿ

ಮಾಡಿದ್ದು ಎಂಬುದನ್ನು ಮುಚ್ಚುಮರೆ ಮಾಡಲೆಂದು ನನ್ನ ಪತ್ನಿಯನ್ನು ನ್ಯಾಯಾಲಯದ ಸಾಕ್ಷಿ ಕಟಕಟೆಯಲ್ಲಿ ಹಾಜರುಪಡಿಸುತ್ತಿಲ್ಲ ಎಂದರೆ ಸರಿಯಲ್ಲ. ಸುಳ್ಳು ಸಾಕ್ಷಿ ಹೇಳಿರುವುದು ಎಂದರೆ ಸರಿಯಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.